

## ವಿಶಿಷ್ಟ ಕಲೆ ‘ಆಟಿ ಕಳೆಂಜ’

ಸಂಸ್ಕೃತಿ ನಾಗರಿಕ ಬದುಕಿನಲ್ಲಿ ನಂಬಿಕೆಗಳ ಉಗಮಕ್ಕೆ ಕಾರಣವಾದ ಸಂಪ್ರದಾಯ, ವಿಶೇಷ ಕಲೆಗಳಾಗಿ ಇಂದಿಗೂ ಪ್ರಚಲಿತದಲ್ಲಿವೆ. ತುಳುನಾಡ ಪ್ರಾದೇಶಿಕ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ, ಇದೀಗ ನಾಗರಿಕತೆಯ ಸಂಪರ್ಕದಿಂದ ಕಣ್ಮರೆಯಾಗುತ್ತಿರುವ ತುಳು ಹಾಡು ಮತ್ತು ಕುಣಿತದ ವೈಶಿಷ್ಟ್ಯಗಳ ಆಟಿ ಕಳೆಂಜವು ಒಂದು ವಿಶಿಷ್ಟ ಜನಪದ ಕಲೆ.

ಕಾಲದೋಷ ಸಹಿತ ದುಷ್ಟ ಶಕ್ತಿಗಳ ದೂರಾಗಿಸಿ ಸುಖ ಸಂತೋಷವ ಕರುಣಿಸಲು ಆಟಿ (ಜುಲೈ–ಆಗಸ್ಟ್) ಮಾಸದಿ ಕಳೆಂಜ ಬರುವನು ಎಂಬುದು ತುಳುನಾಡ ಜನಪದ ನಂಬಿಕೆ. ಎಳೆ ತೆಂಗಿನ ಗರಿಗಳ ಸೀಳಿ ಮಾಡಿದ ವಸ್ತ್ರ ತೊಟ್ಟು, ವರ್ಣ ವಿನ್ಯಾಸದಿ ಅಲಂಕೃತ ಹಾಳೆ ಟೊಪ್ಪಿಗೆಯಿಂದ ತಲೆಯ ಸಿಂಗರಿಸಿ, ಮುಖ ವರ್ಣಿಕೆಯಲ್ಲಿ ಎದ್ದು ಕಾಣುವ ನಾಮದೊಂದಿಗೆ, ತೆನೆಯ ಛತ್ರಿಯನು ಕೈಯಲಿ ಹಿಡಿದು, ತಾಳ ತೆಂಬೆರೆ ಸಹಿತ ತುಳು ಹಾಡಿಗೆ ಕಳೆ ಕಟ್ಟುವಂತೆ ಗೆಜ್ಜೆ ಕಾಲ್ಗಳ ಹೆಜ್ಜೆ ಹಾಕುತ ಮನೆಯ ಮುಂದೆ ನೃತ್ಯ ಮಾಡುವ ಕಳೆಂಜನಿಗೆ ರೋಗ ರುಜಿನಗಳನ್ನು ಶಮನಗೊಳಿಸುವ, ಕ್ಷುದ್ರ ಶಕ್ತಿಗಳ ದೂರಾಗಿಸುವ ಶಕ್ತಿಯಿದೆಯೆಂಬುದು ನಂಬಿಕೆ. ಆಟಿ ಕಳೆಂಜ ಬಂದಾಗ ಅಕ್ಕಿ ಕಾಣಿಕೆ ಕೊಟ್ಟು ಭಯ ಭಕ್ತಿ ಗೌರವ ಆದರದಿಂದ ನಡೆದುಕೊಳ್ಳುವುದು ಪದ್ಧತಿ.

–ಎಸ್.ಎನ್. ಚಂದ್ರಕಲಾ ಕೊಪ್ಪ

## ನಾಣ್ಯಕ್ಕೂ ಸ್ಮಾರಕ

ಹಲವು ರೀತಿಯ ಸ್ಮಾರಕಗಳನ್ನು ನಾವು ನೋಡಿರುತ್ತೇವೆ. ನಾಯಿಗೂ (ಆತಕೂರು ಶಾಸನ) ಸ್ಮಾರಕವನ್ನು ಕಟ್ಟಿಸಿದ ಬಗ್ಗೆ ಚರಿತ್ರೆಯಲ್ಲಿ ದಾಖಲೆ ಇವೆ. ಕವಿ ಸಿದ್ಧಲಿಂಗಯ್ಯ ಅವರ ‘ಕತ್ತೆ ಮತ್ತು ಧರ್ಮ’ ಕವಿತೆಯಲ್ಲಿ ಅಗಸ ತನ್ನ ಒಡನಾಡಿ ಕತ್ತೆಗೆ ಕಟ್ಟಿದ ಸಮಾಧಿ ದೇವಸ್ಥಾನವಾಗಿ ಬೆಳೆದ ವಿವರ ಇದೆ. ಆದರೆ, ಅತ್ಯಂತ ಕಡಿಮೆ ಮುಖ ಬೆಲೆಯ ನಾಣ್ಯಕ್ಕೂ ಸ್ಮಾರಕವನ್ನು ನಿರ್ಮಿಸಿರುವ ದಾಖಲೆ ನಿಜಕ್ಕೂ ಅಚ್ಚರಿಯನ್ನು ಉಂಟುಮಾಡುವಂತಿದೆ.

ಕೆನಡಾದಲ್ಲಿ ಅತ್ಯಂತ ಕಡಿಮೆ ಮುಖ ಬೆಲೆಯ 5 ಸೆಂಟ್ಸ್ ನಾಣ್ಯವನ್ನು ‘ನಿಕಲ್’ ಎಂದು ಕರೆಯುತ್ತಾರೆ. 1951ರಲ್ಲಿ ಬಿಡುಗಡೆಯಾದ ಈ ನಾಣ್ಯದ ಪ್ರತಿಕೃತಿಯನ್ನು ಕೆನಡಾದ ಒಂಟಾರಿಯೋ ರಾಜ್ಯದ ಗ್ರೇಟರ್ ಸಡ್ಬರಿಯಲ್ಲಿರುವ ಡೈನಾಮಿಕ್ ಅರ್ಥ್ ಮ್ಯೂಸಿಯಂ ಬಳಿಯಿರುವ ಪುಟ್ಟ ಬೆಟ್ಟದ ಮೇಲೆ ಸ್ಥಾಪಿಸಲಾಗಿದೆ. 1964ರಲ್ಲಿ ನಿರ್ಮಿಸಲಾದ ಸ್ಮಾರಕವನ್ನು ಉದ್ಯಮಿ ಟೆಡ್ ಜೆಲ್ವಾ ಹಾಗೂ ಶಿಲ್ಪಿ ಬ್ರೂನೋ ಕ್ಯಾವಲ್ಲೊ ಪ್ರತಿಷ್ಠಾಪಿಸಿದ್ದಾರೆ.

30 ಅಡಿ ಎತ್ತರವಿರುವ ಈ ಸ್ಮಾರಕವನ್ನು ‘ಬಿಗ್ ನಿಕಲ್’ ಎಂದು ಕರೆಯುತ್ತಾರೆ. ವಿಶ್ವದ ಅತಿದೊಡ್ಡ ನಾಣ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಸ್ಮಾರಕವನ್ನು ಗ್ರೇಟರ್‌ಸಡ್ಬರಿಯ ನಿಕಲ್ ಗಣಿಗಾರಿಕೆಗೆ ಅರ್ಪಿಸಲಾಗಿದೆ.

–ಜಿ. ನಾಗೇಂದ್ರ, ಸಂಡೂರ








## ಪರಿಸರ ಗಣೇಶ

ಕೊರೊನಾ ಕಾರಣಕ್ಕೆ ಈ ವರ್ಷವೂ ಸಾರ್ವಜನಿಕ ಗಣೇಶೋತ್ಸವ ಆಚರಣೆಯನ್ನು ಸರ್ಕಾರ ನಿಷೇಧಿಸಿದೆ. ಶ್ರದ್ಧೆ, ಭಕ್ತಿ, ನಂಬಿಕೆಗಳ ವಿಚಾರ ಬಂದಾಗ ಭಕ್ತರಿಗೆ ಎಲ್ಲೆಲ್ಲೂ ಗಣೇಶನ ರೂಪವೇ ಕಾಣಲಾರಂಭಿಸುತ್ತದೆ. ಸುತ್ತಲಿನ ಕಾಡು–ಬೆಟ್ಟ, ಮರ–ಗಿಡ, ಪ್ರಾಣಿ–ಪಕ್ಷಿಗಳಲ್ಲೂ ದೈವತ್ವವನ್ನು ಕಾಣುವವರಿಗೆ ಮರದ ಬೊಡ್ಡೆಯೊಂದರಲ್ಲಿ ಸಾಕ್ಷಾತ್ ಗಣೇಶನ ರೂಪವೇ ಹೋಲುವುದನ್ನು ಕಂಡರೆ ಪೂಜಿಸದೇ ಬಿಡುವರೆ?

ಉತ್ತರ ಕನ್ನಡ ಜಿಲ್ಲೆಯ ಶಿರಸಿ–ಯಲ್ಲಾಪುರ ಮಾರ್ಗದಲ್ಲಿ ‘ಭರತನಳ್ಳಿ’ ಎಂಬಲ್ಲಿ ದಾರಿಯಂಚಿನಲ್ಲಿ ಕಣಗಲ ಜಾತಿಯ ಮರದ ಬುಡಭಾಗದಲ್ಲಿ ಗಂಟು ಗಂಟಾಗಿ ಬೆಳೆದು, ಅದು ಹೊರನೋಟಕ್ಕೆ ಗಣೇಶನ ಆಕಾರ ಪಡೆದಿದೆ. ಇಷ್ಟು ಕಾಲ ಗಿಡ–ಪೊದೆಗಳಿಂದ ಮರೆಯಾಗಿದ್ದ ಆಕಾರವೊಂದು ಅದ್ಯಾರಿಗೋ ‘ಗಣೇಶ’ನಾಗಿ ಕಂಡುಬಂದದ್ದೇ ಸುತ್ತ ಊರಿನ ಭಕ್ತರು ಮರದ ಗಣೇಶನಿಗೆ ಪೂಜೆ. ಕಾಣಿಕೆ, ನೈವೇದ್ಯಗಳನ್ನೂ ಅರ್ಪಿಸುತ್ತಿದ್ದಾರೆ. ಅದೇನೇ ಇರಲಿ, ಪ್ರಕೃತಿಯಲ್ಲೂ ದೇವರನ್ನು ಕಾಣುವ ಜನರ ನಡುವೆ, ಈ ನೆಪದಲ್ಲಾದರೂ ಮರಗಳು ಸಂರಕ್ಷಿಸಲ್ಪಟ್ಟರೆ ಮತ್ತಷ್ಟು ದೇವರುಗಳು ಮರದಲ್ಲಿ ಮೂಡಿ ಬರಲೆಂದು ಬೇಡಿಕೊಳ್ಳೋಣ.

–ಅರ್ಚನಾ ಜಿ.ಬೊಮ್ನಳ್ಳಿ